ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸಮಾಡುತ್ತಿರುವ ಎಂ. ಬಿ. ಬಿ. ಎಸ್ ಪದವೀಧರ ವೈದ್ಯರುಗಳು

೧೯೭೮ ಶ್ರೀ ಕೃಷ್ಣ (ಕೃಷ್ಣ ರಾಜಪೇಟೆ)—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸ ಮಾಡುತ್ತಿರುವ ಎಂ. ಬಿ. ಬಿ. ಎಸ್. ಪದವೀಧರ ವೈದ್ಯರ ಸಂಖ್ಯೆ ಎಷ್ಟು, ಇವರು ಎಷ್ಟು ವರ್ಷದಿಂದ ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸ ಮಾಡುತ್ತಿದ್ದಾರೆ, ಇವರಿಗೆ ಕೊಡುತ್ತಿರುವ ವೇತನ ಎಷ್ಟು?

ಆ) ಅನೇಕ ವರ್ಷಗಳಿಂದ ಸ್ಥಳೀಯ ಅಭ್ಯರ್ಥಿಗಳಾಗಿಯೇ ಕೆಲಸ ಮಾಡುತ್ತಿರುವ ಇವರನ್ನು ಖಾಯಂ ಮಾಡಲು ಸರ್ಕಾರಕ್ಕೆ ಇರುವ ತೊಂದರೆ ಏನು?

ಇ) ಗ್ರಾಮೀಣ ಪ್ರದೇಶಗಳಿಗೆ ಹೋಗುವ ವೈದ್ಯರ ಅಭಾವ ಇರುವುದರಿಂದ ಇವರನ್ನು ಖಾಯಂ ಮಾಡಿ ಗ್ರಾಮಾಂತರ ಪ್ರದೇಶಗಳಿಗೆ ನೇಮಕ ಮಾಡಲು ಸಾಧ್ಯವಿಲ್ಲವೇ?

ಈ) ಮಾನವೀಯತೆಯ ದೃಷ್ಟಿಯಿಂದ ಇವರ ಸಮಸ್ಯೆಯನ್ನು ಸರ್ಕಾರದವರು ಪರಿಶೀಲನೆ ಮಾಡಿ ಖಾಯಂ ಮಾಡುವರೇ?

ಶ್ರೀ ಎಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿ ಕುಟುಂಬ ಕಲ್ಯಾಣ ಸಚಿವರು)—

ಅ) ಎಂ. ಬಿ. ಬಿ. ಎಸ್. ಪದವೀಧರ ವೈದ್ಯರುಗಳು ಸ್ಥಳೀಯ ಅಭ್ಯರ್ಥಿಗಳಾಗಿ ಕೆಲಸ ಮಾಡುತ್ತಿರುವವರ ವಿವರ ಈ ಕೆಳಕಂಡಂತೆ ಇದೆ.—

		ನಿಯತಕಾಲಿಕ ವೇತನ (ರೂ. ೧,೨೦೦ –೨,೧೭೫)	ಸಂಚಿತ ವೇತನ (ರೂ.೧,೧೯೦ ಮಾಸಿಕ)	ಒಟ್ಟು
೧)	ಆರೋಗ್ಯ ಅಧಿಕಾರ ಹಾಗೂ ಸಹಾಯಕ ಶಸ್ತ್ರ ಚಿಕಿತ್ಸಕರು	೨೦	೨೧೯	೨೩೯
೨)	ಉಪನ್ಯಾಸಕರು	೫	೨೬	೩೧
	ಒಟ್ಟು	೨೫	೨೪೫	೨೭೦

ಇವರುಗಳು ೫ ವರ್ಷದಿಂದ ಹಿಡಿದು ೨೩ ವರ್ಷಗಳವರೆಗೆ ಸ್ಥಳೀಯ ಅಭ್ಯರ್ಥಿಗಳಾಗಿಯೇ ಈ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಆ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಸ್ಥಳೀಯ ಅಭ್ಯರ್ಥಿಗಳ ಸೇವೆಯನ್ನು ಖಾಯಂಗೊಳಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಅಭ್ಯರ್ಥಿಗಳು ಈಗಾಗಲೇ ಗ್ರಾಮಾಂತರ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಹಸಿರು ಕಾರ್ಡು ಹಂಚಿಕೆ

೧೯೯೮ ಶ್ರೀ ಡಿ. ಟಿ. ಜಯಕುಮಾರ್ (ನಂಜನ ಗೂಡು)—ಮಾನ್ಯ ಆಹಾರ ಹಾಗೂ ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಸಿರು ಕಾರ್ಡುಗಳ ಹಂಚಿಕೆಯಲ್ಲಿ ಅನ್ಯಾಯವಾಗಿ ಬಡ ಜನತೆಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?